# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**

ಸಂಖ್ಯೆ: ಆರ್1/ಅರೇಬಿಕ್.ಪ.ಕಾ/04/2018–19 ದಿನಾಂಕ: 10.08.2018

**ಸುತ್ತೋಲೆ**

ವಿಷಯ: ಫೆಬ್ರವರಿ–2019ನೇ ಮಾಹೆಯಲ್ಲಿ ನಡೆಯಲಿರುವ ಉಸ್ತಾನಿಯಾ/ಫೌಕಾನಿಯ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳುವ ಬಗ್ಗೆ.

*****

ಫೆಬ್ರವರಿ–2019ನೇ ಮಾಹೆಯಲ್ಲಿ ನಡೆಯಲಿರುವ ಉಸ್ತಾನಿಯಾ/ಫೌಕಾನಿಯ ಪರೀಕ್ಷೆಗೆ ಖಾಸಗಿಯಾಗಿ ಪರೀಕ್ಷೆ ಬರೆಯಲು ಇಚ್ಛಿಸುವ ಅಭ್ಯರ್ಥಿಗಳಿಂದ ನೊಂದಣಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ಮೂಲಕ ನಿಗದಿತ ಅರ್ಜಿ ನಮೂನೆಯೊಂದಿಗೆ ತಮ್ಮ ಪ್ರಸ್ತಾವನೆಯನ್ನು ನಿರ್ದೇಶಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು–03 ರವರಿಗೆ ಕಳುಹಿಸಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳುವುದು ಹಾಗೂ ನೋಂದಣಿ ಪ್ರಮಾಣಪತ್ರಗಳನ್ನು (ಎನ್‌ರೋಲ್‌ಮೆಂಟ್ ಸರ್ಟಿಫಿಕೇಟ್) ಸಂಬಂಧಪಟ್ಟ ಸಂಸ್ಥೆಯ ಶಾಲಾ ಮುಖ್ಯಸ್ಥರುಗಳಿಂದ ಪಡೆದು ನಂತರ ಶಾಲೆಯ ಮೂಲಕ ಪರೀಕ್ಷಾ ಶುಲ್ಕವನ್ನು ಪರೀಕ್ಷಾ ಮಂಡಳಿಗೆ ಪಾವತಿಸುವುದು.

**ನೋಂದಣಿ ಶುಲ್ಕದ ವಿವರ**

| ಪರೀಕ್ಷಾ ವಿಷಯ | ನೋಂದಣಿ ಶುಲ್ಕದ ವಿವರ | | |
|---|---|---|---|
| | ಅರ್ಜಿ ಫಾರಂ ಶುಲ್ಕ | ನೋಂದಣಿ ಶುಲ್ಕದ ವಿವರ | ಒಟ್ಟು ಶುಲ್ಕ |
| 1. ಉಸ್ತಾನಿಯಾ | 05–00 | 120–00 | 125–00 |
| 2. ಫೌಕಾನಿಯಾ | 05–00 | 120–00 | 125–00 |

**ಪರೀಕ್ಷಾ ವಿಷಯ ಹಾಗೂ ಪರೀಕ್ಷಾ ಶುಲ್ಕದ ವಿವರ**

| ಪರೀಕ್ಷಾ ವಿಷಯ | ಪರೀಕ್ಷಾ ಶುಲ್ಕದ ವಿವರ | | | | |
|---|---|---|---|---|---|
| | ಪರೀಕ್ಷಾ ಶುಲ್ಕ | ಅರ್ಜಿ ಶುಲ್ಕ | ಅಂಕಪಟ್ಟಿ ಶುಲ್ಕ | ಲ್ಯಾಮಿನೇಷನ್ ಶುಲ್ಕ | ಒಟ್ಟು ಶುಲ್ಕ |
| 1. ಉಸ್ತಾನಿಯಾ | 224–00 | 05–00 | 05–00 | 25–00 | 259–00 |
| 2. ಫೌಕಾನಿಯಾ | 354–00 | 05–00 | 05–00 | 25–00 | 389–00 |

ನೋಂದಣಿ ಶುಲ್ಕವನ್ನು ಈ ಕೆಳಗೆ ನಿಗಧಿಪಡಿಸಿರುವ ದಿನಾಂಕದೊಳಗೆ ಪಾವತಿಸುವುದು.

| ಕ್ರಸಂ | ವಿವರ | ದಿನಾಂಕ: |
|---|---|---|
| 01 | ಅಭ್ಯರ್ಥಿಗಳು ನೋಂದಣಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 25.08.2018 |
| 02 | ನೆಫ್ಟ್ ಚಲನ್ ಮೂಲಕ ಬ್ಯಾಂಕಿಗೆ ಹಣ ತುಂಬಲು ಕೊನೆಯ ದಿನಾಂಕ | 27.08.2018 |
| 03 | ಅರೇಬಿಕ್ ಶಾಲೆಗಳ ಮುಖ್ಯಸ್ಥರು ನೋಂದಣಿ ಅರ್ಜಿಗಳನ್ನು ಮಂಡಳಿಗೆ ಸಲ್ಲಿಸಬೇಕಾದ ದಿನಾಂಕ | 31.08.2018 |

ಪರೀಕ್ಷಾ ಶುಲ್ಕವನ್ನು ಈ ಕೆಳಗೆ ನಿಗಧಿಪಡಿಸಿರುವ ದಿನಾಂಕದೊಳಗೆ ಪಾವತಿಸುವುದು.

| ಕ್ರಸಂ | ವಿವರ | ದಿನಾಂಕ: |
|---|---|---|
| 1 | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 18.09.2018 |
| 2 | ನೆಫ್ಟ್ ಚಲನ್ ಮೂಲಕ ಬ್ಯಾಂಕಿಗೆ ಹಣ ತುಂಬುವ ದಿನಾಂಕ | 19.09.2018 |
| 3 | ಅರೇಬಿಕ್ ಶಾಲೆ/ಕಾಲೇಜುಗಳು ಮಂಡಳಿಗೆ ಅರ್ಜಿಗಳನ್ನು ಸಲ್ಲಿಸಬೇಕಾದ ದಿನಾಂಕ | 24.09.2018 |
| 4 | ದಂಡಸಹಿತ ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 03.10.2018 |

ಅಭ್ಯರ್ಥಿಗಳಿಂದ ಪಡೆದ ಅರ್ಜಿ ಶುಲ್ಕ ಹಾಗೂ ನೋಂದಣಿ ಶುಲ್ಕವನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿರ್ದೇಶಕರು (ಇತರೆ ಪರೀಕ್ಷೆಗಳು),ಕ.ಪ್ರೌ.ಶಿ.ಪ.ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03 ರವರ ಹೆಸರಿಗೆ NEFT Challan ಮೂಲಕ ಪಾವತಿಸಿ ಚಲನ್‌ನ ಮೂಲ ಪ್ರತಿಯೊಂದಿಗೆ ಅರ್ಜಿಗಳನ್ನು ನೇರವಾಗಿ **ಶ್ರೀ ಸಿ.ವಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಆರ್ ಶಾಖೆ, 4ನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03,** ಈ ವಿಳಾಸಕ್ಕೆ ಸಲ್ಲಿಸುವುದು. NEFT ಚಲನ್ ಲಗತ್ತಿಸದೇ ಇದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ತಮ್ಮ ಶಾಲಾ ವತಿಯಿಂದ ಯಾವುದೇ ಖಾಸಗಿ ಅಭ್ಯರ್ಥಿಗಳು ಇಲ್ಲದಿದ್ದಲ್ಲಿ ಶಾಲಾ ಮುಖ್ಯಸ್ಥರು ಶೂನ್ಯ ವರದಿ ಕಳುಹಿಸುವುದು.

**ವಿಶೇಷ ಸೂಚನೆ:-**

1. ಮಂಡಳಿ ನಿಗಧಿಪಡಿಸಿದ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಲ್ಪಟ್ಟಿದ್ದಲ್ಲಿ ಆ ದಿನಗಳ ಮಾರನೆಯ ಕೆಲಸದ ದಿನವನ್ನು ಕೆಲಸದ ಕೊನೆಯ ದಿನವೆಂದು ಪರಿಗಣಿಸಲಾಗುವುದು.
2. ನಿಗದಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿಸದಿದ್ದಲ್ಲಿ ಪ್ರತಿ ದಿನ ವಿಳಂಭಕ್ಕೆ ಪ್ರತಿ ವಿದ್ಯಾರ್ಥಿಗೆ ರೂ.150-00 (ರೂ.ನೂರ ಐವತ್ತು) ರಂತೆ ದಂಡ ವಿಧಿಸಲಾಗುವುದು.

<u>ಉಸ್ತಾನಿಯಾ ಪರೀಕ್ಷೆಗೆ ಅರ್ಹತೆಯ ನಿಯಮಾವಳಿಗಳು</u>

1. ದಿನಾಂಕ:01.02.2019ಕ್ಕೆ 13 ವರ್ಷ ಪೂರ್ಣಗೊಂಡಿರಬೇಕು.
2. ಮಾನ್ಯತೆ ಪಡೆದಿರುವ ಪ್ರಾಥಮಿಕ ಶಾಲೆಯಲ್ಲಿ 4ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.
3. ತಹತಾನಿಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
4. ನೋಂದಣಿ ಅರ್ಜಿಯಲ್ಲಿ ಶಾಲಾ ಮುಖ್ಯಸ್ಥರು ವಿದ್ಯಾರ್ಥಿಯು ಸಂಬಂಧಪಟ್ಟ ಪರೀಕ್ಷೆಗೆ ನಿಗಧಿಪಡಿಸಿರುವ ಪಠ್ಯ ಪುಸ್ತಕಗಳನ್ನು ಅಭ್ಯಸಿಸಿರುವ ಬಗ್ಗೆ ದೃಢೀಕರಿಸಬೇಕು.

<u>ಫೌಕಾನಿಯಾ ಪರೀಕ್ಷೆಗೆ ಅರ್ಹತೆಯ ನಿಯಮಾವಳಿಗಳು</u>

1. ದಿನಾಂಕ: 01.02.2019ಕ್ಕೆ 15 ವರ್ಷಗಳು ಪೂರ್ಣವಾಗಿರಬೇಕು.
2. ಉಸ್ತಾನಿಯಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ದೃಢೀಕೃತ ಅಂಕಪಟ್ಟಿ ಪ್ರತಿಯನ್ನು ಲಗತ್ತಿಸುವುದು.
3. ನೋಂದಣಿ ಅರ್ಜಿಗಳಲ್ಲಿ ಶಾಲಾ ಮುಖ್ಯಸ್ಥರು, ವಿದ್ಯಾರ್ಥಿಗಳು ಈ ಪರೀಕ್ಷೆಗೆ ಸಂಬಂಧಪಟ್ಟ ಪಠ್ಯ ಪುಸ್ತಕಗಳನ್ನು ಅಭ್ಯಾಸ ಮಾಡಿರುವ ಬಗ್ಗೆ ದೃಢೀಕರಿಸಿ ಕಳುಹಿಸಬೇಕು.

<u>ನೋಂದಣಿ ಅರ್ಜಿಗಳನ್ನು ಮಂಡಳಿಗೆ ಕಳುಹಿಸುವ ಮೊದಲು ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು</u>

1) ಪ್ರಸಕ್ತ ವರ್ಷದ ಶಾಲೆಯ ಮಾನ್ಯತೆ/ಮಾನ್ಯತೆ ನವೀಕರಣದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು. ತಪ್ಪಿದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2) ಜನ್ಮ ದಿನಾಂಕ ದಾಖಲೆಗೆ ದೃಢೀಕೃತ ವರ್ಗಾವಣೆ ಪತ್ರವನ್ನು (ಟಿ.ಸಿ) / ದಾಖಲಾತಿ ಉದ್ದರಣೆ ವಹಿಯ ಪ್ರತಿಯನ್ನು (ARE) ಸಲ್ಲಿಸಬೇಕು.

3) ಖಾಸಗಿ ಅಭ್ಯರ್ಥಿಗಳ ಇತ್ತೀಚಿನ 3 ಭಾವಚಿತ್ರಗಳ (ಪಾಸ್‌ಪೋರ್ಟ್ ಅಳತೆಯ) ಮೇಲೆ ಅಭ್ಯರ್ಥಿಯ ಮತ್ತು ಶಾಲಾ ಮುಖ್ಯಸ್ಥರ ಸಹಿ ಇರಬೇಕು (ಒಂದು ಭಾವ ಚಿತ್ರವನ್ನು ಅರ್ಜಿಯಲ್ಲಿ ಅಂಟಿಸಿ ದೃಢೀಕರಿಸಿ ಸಲ್ಲಿಸುವುದು)

4) ಅಪೂರ್ಣವಾದ ಹಾಗೂ ನಿಗಧಿತ ವೇಳೆಗೆ ಶುಲ್ಕ ಪಾವತಿಸದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.

ನಿರ್ದೇಶಕರು
(ಇತರೆ ಪರೀಕ್ಷೆಗಳು)

<u>ಪ್ರತಿಗಳು :-</u>

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ನಿರ್ದೇಶಕರು, ಉರ್ದು ಮತ್ತು ಭಾಷಾ ಅಲ್ಪಸಂಖ್ಯಾತ ನಿರ್ದೇಶನಾಲಯ, ಆಯುಕ್ತರ ಕಚೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ
3. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ
4. ನಿರ್ದೇಶಕರು (ಇ.ಪ) ರವರ ಹಾಗೂ ಕಾರ್ಯದರ್ಶಿಗಳು ಆಪ್ತ ಶಾಖೆಗೆ.
5. ಶಾಖಾಧಿಕಾರಿಗಳು, ಕಂಪ್ಯೂಟರ್ ಶಾಖೆರವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಸಲ್ಲಿಸಿದೆ.
6. ಸಂಬಂಧಿಸಿದ ಶಾಲಾ/ಕಾಲೇಜುಗಳ ಮುಖ್ಯಸ್ಥರುಗಳಿಗೆ.
7. ಕಛೇರಿ ಪ್ರತಿ.

G:\Arebic\ARABIC-2019\Notification-2019.docx